



## ಕಳೆದ ಸಂಚಿಕೆಯಲ್ಲಿ

ಸುಗಂಧಾಳಿಗೆ ರೀತಾ ಕೊಟ್ಟ ಸೆಕ್ಸ್ ಪುಸ್ತಕದಲ್ಲಿ ಏನಿದೆ ಎಂದು ತಿಳಿಯುವ ಕುತೂಹಲದಿಂದ ಅಮ್ಮ ಇಲ್ಲದೇ ಇರುವ ಸಮಯದಲ್ಲಿ ಓದುತ್ತಿದ್ದಳು. ಮೂರು ದಿನದ ಬಳಿಕ ಪುಸ್ತಕ ವಾಪಸ್ ಕೊಟ್ಟಳು. ರೀತಾ ಮುಟ್ಟು ಮುಂದಕ್ಕೆ ಹಾಕುವ ಮಾತ್ರೆ ಬಗ್ಗೆ ಹೇಳಿ ಮಾತ್ರೆಯನ್ನೂ ಕೊಡುತ್ತಾಳೆ. ವೈದ್ಯರ ಸಲಹೆಯಿಲ್ಲದೆ ಮಾತ್ರೆ ತೆಗೆದುಕೊಳ್ಳುವಂತಿಲ್ಲ ಎಂಬ ವಾಸ್ತವ ಸುಗಂಧಾಳಲ್ಲಿ ಜಾಗೃತವಾಗಿರುತ್ತದೆ. ರೀತಾ ಮದುವೆಯಾಗಿ ಹೋದ ಮೇಲೆ ಆಕೆಯ ಭೇಟಿ ನಿಂತುಹೋಯಿತು. ಈ ಮಧ್ಯೆ ಮನೆ ಬದಲಾಯಿಸುವ ಬಗ್ಗೆ ಅಮ್ಮ ಚಿಂತನೆ ನಡೆಸುತ್ತಾಳೆ.

ಈ ಮಧ್ಯೆ ರಿತಿಕ್ ಜೊತೆಗೆ ಒಡನಾಟ ಹೆಚ್ಚುತ್ತದೆ. ಸೆಕ್ಸ್ ಪುಸ್ತಕ ಓದಿದ ಬಳಿಕ ರಿತಿಕ್ ಮನೆಗೆ ಬಂದಾಗಲೆಲ್ಲ ಸುಗಂಧಾಗೆ ಏನೋ ಕಂಪನ. ಆದರೆ ಈ ಸಂಬಂಧವನ್ನು ಮದುವೆಯ ಪರಿಧಿ ಒಳಗೆ ಬಂಧಿಸಲು ಈಕೆಗೆ ಇಷ್ಟವಾಗುವುದಿಲ್ಲ. ಇವಳ ಮನೆಗೆ ರಿತಿಕ್ ಬಂದು ಹೋಗುವ ವಿಚಾರ ಕಾಲೊನಿಯ ಮಂದಿಗೆ ಹಿಡಿಸದೆ ಒಂದು ದೂರು ಪತ್ರವನ್ನು ಇವಳ ಕಚೇರಿಯ ಸಿಕರವಾರ ಅವರಿಗೆ ನೀಡುತ್ತಾರೆ. ಜನರ ಬಾಯಿ ಮುಚ್ಚಿಸಲು ರಿತಿಕ್‌ನನ್ನು ಮದುವೆಯಾಗಿಬಿಡಿ ಎನ್ನುವ ಸಲಹೆಯಿಂದ ಸುಗಂಧಾ ಕೆರಳುತ್ತಾಳೆ.

ಹೇಳಿದೆ, 'ಈಗ ಸಾಹೇಬ್ರು ಕರೀತಿದ್ದಾರೆ, ಆಮೇಲೆ ಮಾತಾಡ್ತೀನಿ.'

ನಾನು ಫೋನ್ ಕಟ್ ಮಾಡಿದೆ. ಇಂಥ ಮನಃಸ್ಥಿತಿಯಲ್ಲಿ ನಾನೇಕೆ ಅಮ್ಮನಿಗೆ ಫೋನ್ ಮಾಡಿದೆ ಎಂದು ಪಶ್ಚಾತ್ತಾಪವಾಗುತ್ತಿತ್ತು. ಅಮ್ಮ ಇನ್ನು ನನ್ನ ಬಗ್ಗೆ ಯೋಚಿಸುತ್ತಾರೆ. ಸ್ವಲ್ಪ ಹೊತ್ತಿನ ನಂತರ ನಾನು ಸಹಜಾವಸ್ಥೆಗೆ ಬಂದ ನಂತರ ಮತ್ತೆ ಅಮ್ಮನೊಂದಿಗೆ ಮಾತನಾಡುವೆ, ಆಗ ಅವರು ನಿಶ್ಚಿಂತರಾಗುತ್ತಾರೆ ಎಂದು ನಿರ್ಧರಿಸಿದೆ. ಸುಮಾರು ಐದು ಗಂಟೆಗೆ ಅವರೊಂದಿಗೆ ಮತ್ತೆ ತಾಳ್ಮೆಯಿಂದ ಮಾತನಾಡಿದೆ.

ಇದೇ ಸಮಾಜದ ವ್ಯವಹಾರವೇ? ನಾನು ಕಾಲೇಜಿನಲ್ಲಿ ಸಮಾಜ ವಿಜ್ಞಾನದ ಬಗ್ಗೆ ಓದುವಾಗ ಸಮಾಜದ ವ್ಯವಹಾರದ ಬಗ್ಗೆ ಓದಿದ್ದೆ. ಸಮಾಜ ತತ್ಕಾಲದ ವಿಚಾರಗಳಿಗೆ ಪರಿಸ್ಥಿತಿಗಳನ್ನು ಸೃಷ್ಟಿಸುತ್ತದೆ, ಅದು ಪ್ರತಿಯೊಬ್ಬ ನಾಗರಿಕನಿಗೆ ಅದರ ಪ್ರಕಾರವೇ ಜೀವನ ಸಾಗಿಸಲು ವಿವಶಗೊಳಿಸುತ್ತದೆ. ಆದರೆ ಸಮಾಜದ ಈ ವಿಶೇಷತೆಯ ವ್ಯಾಖ್ಯೆ ನನಗೆಂದೂ ಅರ್ಥವಾಗಲಿಲ್ಲ. ಸಮಾಜ ಮನುಷ್ಯರಿಂದ ಕೂಡಿಯೇ ಆಗುತ್ತದೆ. ಮನುಷ್ಯನಿದ್ದರೆ ಸಮಾಜ. ಮನುಷ್ಯನ ಯೋಚನೆ ಸಮಾಜದ ಯೋಚನೆಯಾಗುತ್ತದೆ. ಹೀಗಿರುವಾಗ ಸಮಾಜ ವಿಚಾರಗಳನ್ನು ರಚಿಸುತ್ತದೆ ಎಂದೇಕೆ ಹೇಳಬೇಕು? ವಿಚಾರಗಳನ್ನು ಸ್ವತಃ ಮನುಷ್ಯ ತನ್ನ ಹಿತಕ್ಕಾಗಿ ರಚಿಸುತ್ತಾನೆ. ನಂತರ ಮತ್ತೊಂದು ಪ್ರಶ್ನೆ ಉದ್ಭವಿಸುತ್ತದೆ, ಮನುಷ್ಯನ ಹಿತವೆಂದರೇನು? ಮನುಷ್ಯನ ಹಿತದ ದೃಷ್ಟಿಯಿಂದ ಸಾಮಾಜಿಕ ಹಿತದ ಬಗ್ಗೆ ಮಾತನಾಡಲಾಗುತ್ತದೆ, ಅದು ಪುರುಷಹಿತಕ್ಕೆ ಪರ್ಯಾಯವಾಗುತ್ತದೆ, ಹೀಗಿರುವಾಗ ಸ್ತ್ರೀಹಿತ ಎಲ್ಲಿದೆ?

ಹೆಣ್ಣು ವೇಶ್ಯೆಯಾಗುತ್ತಾಳೆ, ಏಕೆಂದರೆ ಪುರುಷ ಅವಳ ದೇಹಕ್ಕೆ ಬದಲು ಅವಳಿಗೆ ಹಣ ಕೊಡಲು ಸಿದ್ಧನಾಗಿರುತ್ತಾನೆ, ಹೆಣ್ಣು ದಾಸಿಯಾಗಿರುತ್ತಾಳೆ. ಏಕೆಂದರೆ ಪುರುಷ ಪ್ರತಿಯಾಗಿ ಬೇರೆ ಪುರುಷರಿಂದ ಅವಳನ್ನು ರಕ್ಷಿಸುತ್ತಾನೆ. ಪುರುಷ ಏನು ಮಾಡಲು ಬಯಸುವನೋ, ಅದಾಗಲು ಹೆಣ್ಣು ಸಿದ್ಧಳಾಗುತ್ತಾಳೆ. ಏಕೆಂದರೆ ಪುರುಷ ಪ್ರತಿಯಾಗಿ ಬೇರೆ ಪುರುಷರಿಂದ ಅವಳನ್ನು ರಕ್ಷಿಸುತ್ತಾನೆ. ಪುರುಷ ಏನು ಮಾಡಲು ಬಯಸುವನೋ, ಅದಾಗಲು ಹೆಣ್ಣು ಸಿದ್ಧಳಾಗುತ್ತಾಳೆ. ಏಕೆಂದರೆ ಅವಳು ಬದುಕಲು ಬಯಸುತ್ತಾಳೆ. ದುಃಖದ ವಿಷಯವೆಂದರೆ, ಪುರುಷನ ದೃಷ್ಟಿಯಲ್ಲಿ ತನ್ನನ್ನು ತಾನು ಶ್ರೇಷ್ಠಳೆಂದು ಸಾಬೀತು ಮಾಡುವ ಸ್ಪರ್ಧೆಯಲ್ಲಿ, ಪುರುಷನ ದಾಸಿ ಅಥವಾ ವೇಶ್ಯೆಯಾಗದೆ ಬದುಕಲು ಬಯಸುವ ಹೆಣ್ಣನ್ನು ಸಾರ್ವಜನಿಕವಾಗಿ ಅವಮಾನ ಮಾಡಲಾಗುತ್ತದೆ. ನನಗೂ ಸಹ ಸಮಾಜಹಿತದ ಕಾರಣಗಳನ್ನು ಕೊಟ್ಟು ಗದರಿಸಲಾಗುತ್ತಿದೆ, ಬೆದರಿಸಲಾಗುತ್ತಿದೆ. ಈಗ ನಾನು ಸಮಾಜದ ತಥಾಕಥಿತ ಶುಚಿತ್ವದ ಎದುರು ತಲೆಬಾಗಬೇಕು ಅಥವಾ ಸಾಹಸದೊಂದಿಗೆ ಸಮಾಜವನ್ನು ಎದುರಿಸಬೇಕಿತ್ತು, ನಂತರ ಏನಾದರಾಗಲಿ.

ನಾನು ಉಳಿದ ಸಮಯವನ್ನು ವಿಚಾರಗಳ ಗೊಂದಲ ಮತ್ತು ಸಮಾಜದಲ್ಲಿ ಹೆಣ್ಣಿನ ಸ್ಥಿತಿಗತಿಯ ಬಗ್ಗೆ ಚಿಂತಿಸುವುದರಲ್ಲಿ ಕಳೆದೆ; ಈ ಚಿಂತನದ ಕೇಂದ್ರದಲ್ಲಿ ನಾನಿದ್ದೆ; ನಾನೇನು? ಹೇಗಿದ್ದೇನೆ? ಸಮಾಜ ನನ್ನೊಂದಿಗೆ ಹೇಗೆ ವರ್ತಿಸಬೇಕೋ ಅಥವಾ ಬೇಡವೋ? ನಾನು ನನ್ನ ಪ್ರಶ್ನೆಗಳು ಮತ್ತು ನನ್ನ ಉತ್ತರದಲ್ಲಿದ್ದೆ.

ಅಂದು ಕಚೇರಿಯಿಂದ ಹೊರಟ ನಂತರ ಮನೆಗೆ ಹೋಗಲು ಮನಸ್ಸಾಗುತ್ತಿರಲಿಲ್ಲ. ನಾನು ರಿತಿಕ್‌ಗೆ 'ಬಿಗ್ ಫೌಂಟೇನ್' ಸಮೀಪ ಭೇಟಿಯಾಗಲು ಫೋನ್ ಮಾಡಿದೆ. ನಂತರ ಪೆಡಲ್‌ರಿಕ್ಷಾ ಹಿಡಿದು ಬಿಗ್ ಫೌಂಟೇನ್ ಕಡೆಗೆ ಹೊರಟೆ.

'ನಾನು ನಿನ್ನನ್ನು ಕಚೇರಿಯ ಗೇಟ್‌ನಿಂದಲೇ ರಿಸೀವ್ ಮಾಡ್ತಿದ್ದೆ', ರಿತಿಕ್ ನನ್ನೆದುರು ಮೋಟಾರ್ ಸೈಕಲ್‌ನ್ನು ನಿಲ್ಲಿಸುತ್ತಾ ಹೇಳಿದ. ನಾನು ಅವನು ಅಲ್ಲಿಗೆ ಬರುವುದಕ್ಕೆ ಐದು ನಿಮಿಷ ಮೊದಲೇ ಅಲ್ಲಿಗೆ ಹೋಗಿದ್ದೆ.

'ನಡಿ, ಎಲ್ಲಾದ್ರು ಕೂರೋಣ', ನಾನು ಅವನ ಮಾತನ್ನು ಕೇಳಿಯೂ ಕೇಳದಂತಿದ್ದು, ಅವನ ಹಿಂದೆ ಬಂದು ಕೂತೆ.

'ಎಲ್ಲಿಗೆ ಹೋಗ್ಬೇಕು?'

'ಎಲ್ಲಿಗಾದರೂ'

'ಆದರೂ ಎಲ್ಲಿಗೆ?'

'ಹೇಳಿದೆನಲ್ಲ! ಎಲ್ಲಿಗಾದ್ರು'

'ಏನಾಯ್ತು? ಮೂಡ್ ಸರಿಯಿದೆಯಲ್ವಾ!'

'ಇಲ್ಲ'

'ಏಕೆ?''

'ಈಗ್ಲೇ ಹೇಳ್ತೀನಿ'

'ಹೇಳೋದು ತುಂಬಾ ಇದೆಯಾ?'

'ಹಾಗಂತಲೇ ತಿಳಿ'

ರಿತಿಕ್ ಛಾವಣಿ ಪ್ರದೇಶದೆಡೆಗೆ ಕಾರನ್ನು ಹೊರಳಿಸಿದ. ಕೆಲವೇ ಕ್ಷಣಗಳಲ್ಲಿ ನಾವು ನಮ್ಮ ಪ್ರೀತಿಯ ಜಾಗ 'ವಾರ್ ಮೆಮೋರಿಯಲ್ ಸ್ಕ್ವೈಯರ್'ಗೆ ಬಂದೆವು. ನನಗಿದು ಪ್ರೀತಿಯ ಜಾಗವಾಗಿತ್ತು 'ವಾರ್ ಮೆಮೋರಿಯಲ್ ಸ್ಕ್ವೈಯರ್.'

ರಿತಿಕ್ ಕಾರು ನಿಲ್ಲಿಸಿದ. ನಾನು ಇಳಿದು ಒಂದು ಕಡೆಗೆ ಹೋದೆ. ನನಗಿಷ್ಟವಾದ ಜಾಗವನ್ನು ಆಯ್ಕೆ ಮಾಡಿಕೊಂಡು ಕೂತೆ. ರಿತಿಕ್ ಸಹ ಕಾರನ್ನು ನಿಲ್ಲಿಸಿ, ನನ್ನ ಬಳಿಗೆ ಬಂದು ಕೂತ.

'ಏನ್ ವಿಷಯ? ಈಗ ಹೇಳು' ರಿತಿಕ್ ಕೇಳಿದ. ಕೇಳುವ ಉತ್ಸುಕತೆ ಅವನ ಧ್ವನಿಯಲ್ಲಿ ಸ್ಪಷ್ಟವಾಗಿ ಕಾಣಬರುತ್ತಿತ್ತು.

'ಈ ನಿಯಮ ಕಾನೂನು ಮಾಡಿದ್ದು ಯಾರು?' ರಿತಿಕ್‌ನನ್ನು ಕೇಳಿದೆ.

'ಯಾವ ನಿಯಮ ಕಾನೂನು?' ರಿತಿಕ್‌ಗೆ ನನ್ನ ಆಶಯ ಅರ್ಥವಾಗಲಿಲ್ಲ.

'ಇದೇ ಸಮಾಜದ ನಿಯಮಗಳು...'

'ಮನುಷ್ಯರಾದ ನಾವೇ ಮಾಡಿದ್ದು, ಬೇರೆ ಯಾರು ಮಾಡ್ತಾರೆ? ಕಡೇಪಕ್ಷ ಎಲಿಯನ್‌ನಿಂದ ಇಂಥ ಮೂರ್ಖತನವನ್ನು ಆಶಿಸಲಾಗದು', ರಿತಿಕ್ ತನ್ನ ಚಿರಪರಿಚಿತ ಶೈಲಿಯಲ್ಲಿ ಮುಗುಳ್ನಕ್ಕ.

'ಇವೆಲ್ಲವೂ ಖಂಡಿತ ಮೂರ್ಖತನದ್ದು. ಒಬ್ಬ ಯಾವ ಹಾದಿಯಲ್ಲಿ ಹೋಗುತ್ತಾನೋ, ಉಳಿದವರು ಸಹ ಕಣ್ಣು ಮುಚ್ಚಿಕೊಂಡು ಅವನನ್ನು ಹಿಂಬಾಲಿಸಿ ಹೋಗ್ತಾರೆ, ಮಧ್ಯದಲ್ಲಿ ಗುಂಡಿಗೆ ಬಿದ್ದರೂ ಯೋಚಿಸುವುದಿಲ್ಲ.'

'ನಿನ್ನ ಮಾತಿನಲ್ಲಿ ತೂಕವಿದೆ, ಆದ್ರೆ ಏನ್ ವಿಷಯ, ಮೈ ಡಿಯರ್?' ರಿತಿಕ್ ಕೇಳಿದ.

'ಇವತ್ತು ಸಿಕರವಾರರು ನನ್ನನ್ನು ತಮ್ಮ ಚೇಂಬರ್‌ಗೆ ಕರೆಸಿ ಈ ಪತ್ರವನ್ನು ತೋರಿಸಿದರು.'

'ಲವ್ ಲೆಟರ್?'

'ಯೂ ಶಟಪ್! ಲವ್ ಲೆಟರ್ ಅಲ್ಲ, ನನ್ನ ಬಗ್ಗೆ ದೂರಿನ ಪತ್ರ'

'ನಿನ್ನ ಬಗ್ಗೆ ದೂರು? ದೂರು ಕೊಟ್ಟವರು ಯಾರು?' ರಿತಿಕ್‌ಗೆ ಆಶ್ಚರ್ಯವಾಯಿತು.

'ನಮ್ಮ ಬೀದಿಯವರು.'

'ಏಕೆ? ನಿನ್ನಿಂದ ಅವರಿಗೇನು ತೊಂದ್ರೆಯಾಗ್ತಿದೆ?'

'ಅವರಿಗೆ ನನ್ನಿಂದ ತುಂಬಾ ತೊಂದ್ರೆಯಾಗ್ತಿದೆಯಂತೆ, ನನ್ನ ಮನೆಗೆ ಕೆಟ್ಟ ಜನ ಬಂದುಹೋಗ್ತಾರಂತೆ, ಇದರಿಂದ ಬೀದಿಯ ವಾತಾವರಣ ಹಾಳಾಗ್ತಿದೆಯಂತೆ'

(ಸಶೇಷ)